# 4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ

ಎಸ್. ಸಿ. ನಂ.27/2022

ಪಿ ಡಬ್ಲ್ಯೂ 17

ಸಿ ಡಬ್ಲ್ಯೂ 25

| | | |
|---|---|---|
| ಸಾಕ್ಷಿದಾರರ ಹೆಸರು | : | ಡಾಃ ಭುವನೇಶ್ವರಿ ಎಂ ಎಸ್ |
| ಗಂಡನ ಹೆಸರು | : | ಎನ ಧನಂಜಯಕುಮಾರ |
| ವಯಸ್ಸು | : | 37 ವರ್ಷಗಳು |
| ಉದ್ಯೋಗ | : | ಹಿರಿಯ ವೈಜ್ಞಾನಿಕ ಅಧಿಕಾರಿ ವಿಧಿ ವಿಜ್ಞಾನ ಪ್ರಯೋಗಾಲಯ |
| ವಾಸಸ್ಥಳ | : | ಬೆಂಗಳೂರು |

ದಿನಾಂಕಃ 20.05.2026 ರಂದು ಸಾಕ್ಷಿಯನ್ನು ವಿಸಿ ಮುಖಾಂತರ ಬೆಂಗಳೂರು ಎಫಎಸಎಲನಿಂದ ಗೂಗಲ್ ಮೀಟ ಮುಖಾಂತರ ಕನೆಕ್ಟ ಮಾಡಿದ್ದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು ದಿನಾಂಕ 27.06.2022 ರಿಂದ 01.07.2022 ರವರೆಗೆ ಒಒಡಿಯಲ್ಲಿ ನಾನು ಬೆಳಗಾವಿ ವಿಧಿವಿಜ್ಞಾನ ಪ್ರಯೋಗಾಲಯದಲ್ಲಿ ಹಿರಿಯ ವೈಜ್ಞಾನಿಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಎಂ. ಎಸ್ ಸಿ , ಇನ್ ಜಿವಾಲಜಿಯಲ್ಲಿ ಡಿಗ್ರಿ ಪಡೆದಿರುತ್ತೇನೆ.

ದಿನಾಂಕ 04.03.2022 ರಂದು ಧಾರವಾಡ ಶಹರ ಪೋಲಿಸಠಾಣೆಯ ಕ್ರೈಂ ನಂಬರ 27/2022 ರಲ್ಲಿ ಒಟ್ಟು ಒಂಬತ್ತು ಸೀಲ್ಡ ಆದ ಸ್ಥಿತಿಯಲ್ಲಿದ್ದ

ಆರ್ಟಿಕಲಗಳನ್ನು ನನ್ನ ಕಚೇರಿಗೆ ಚನ್ನಬಸಪ್ಪ ಎನ್ ಸಿಪಿಸಿ 2183 ರವರು ತಂದು ಹಾಜರುಪಡಿಸಿದ್ದು, ಅದರ ಜೊತೆಗೆ ಕೋರಿಕೆ ಪತ್ರವನ್ನು ಕಳುಹಿಸಿಕೊಟ್ಟಿದ್ದರು. ಆರ್ಟಿಕಲಗಳನ್ನು ನೋಡಲಾಗಿ ಅದರ ಮೇಲಿರುವ ಮಾದರಿ ಸೀಲು ಹಾಗೂ ಇನವಾಯಿಸಿಗೆ ತಾಳೆಯಾಗಿದ್ದು, ಸ್ವೀಕೃತಿ ಪತ್ರವನ್ನು ನೀಡಿರುತ್ತಾರೆ. ಸದರಿ ಸ್ವೀಕೃತಿ ಪತ್ರವನ್ನು ನಿಶಾನೆ ಪಿ–20 ಎಂದು ಗುರುತಿಸಲಾಯಿತು.

ಅದೇ ದಿನ ಸದರಿ ವಸ್ತುಗಳನ್ನು ನನಗೆ ಪರೀಕ್ಷೆಗಾಗಿ ಕೊಟ್ಟಿರುತ್ತಾರೆ. ಸದರಿ ಆರ್ಟಿಕಲಗಳನ್ನು ದಿನಾಂಕ 27.06.2022 ರಂದು ನಾನು ಸೀಲು ತೆರೆದು ಈ ಕೆಳಕಂಡ ವಸ್ತುಗಳನ್ನು ಪರೀಕ್ಷೆಗೆ ಒಳಪಡಿಸಿರುತ್ತೇನೆ.

1. One Chakku
2. One Top
3. One pant
4. One Veil
5. One under wear
6. One Bra
7. One Jeans pant
8. One T shirt
9. One T–shirt

ಸದರಿ ವಸ್ತುಗಳ ಮೇಲೆ ರಕ್ತದ ಕಲೆ ಇದೆಯಾ ಮತ್ತು ಇದ್ದಲ್ಲಿ ಯಾವ ಗುಂಪಿಗೆ ಸೇರಿದ ರಕ್ತ ಎಂದು ಪರೀಕ್ಷಿಸಲು ತನಿಖಾಧಿಕಾರಿಯು ಕೋರಿಕೊಂಡಿದ್ದು ನಾನು ಪರೀಕ್ಷಿಸಿ ಈ ಕೆಳಕಂಡಂತೆ ನನ್ನ ಅಭಿಪ್ರಾಯ ಕೊಟ್ಟಿರುತ್ತೇನೆ.

1. Blood stains were detected in articles Nos. 1, 2, 3, 5, 7 and 8.

2. Blood stains were not detected in article Nos. 4, 6 and 9

3. Article Nos. 2, 3, 5, 7 and 8 were stained with human blood.

4. Article Nos. 2, 3, 5, 7 and 8 were stained with B blood group.

5. Article No. 1 were insufficient for serology analysis.

ಈ ಬಗ್ಗೆ ವರದಿ ಕೊಟ್ಟಿದ್ದು ಅದನ್ನು ಈಗ ವಿಸಿ ಪರದೆಯ ಮೇಲೆ ತೋರಿಸಲಾಗಿ ಗುರುತಿಸಿದ್ದು ಟೆಸ್ಟ ರಿಪೋರ್ಟನ್ನು ನಿಶಾನೆ ಪಿ–21 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಶಾನೆ ಪಿ–21(ಎ) ಎಂದು ಗುರುತಿಸಲಾಯಿತು.

ಸ್ಯಾಂಪಲ ಸೀಲನ್ನು ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿ–22 ಎಂದು ಮತ್ತು ನನ್ನ ಸಹಿಯನ್ನು ನಿಶಾನೆ ಪಿ–22(ಎ) ಎಂದು ಗುರುತಿಸಲಾಯಿತು.

ನಾನು ಪರೀಕ್ಷಿಸಿದ ಆರ್ಟಿಕಲಗಳನ್ನು ನನಗೆ ತೋರಿಸಿದರೆ ಗುರುತಿಸಬಲ್ಲೆ. ಸಾಕ್ಷಿಗೆ ವಿಸಿ ಪರದೆಯ ಮುಖಾಂತರ ಸದರಿ ವಸ್ತುಗಳನ್ನು ತೋರಿಸಲಾಯಿತು.

1. One Chakku –ಅದನ್ನು ಈಗಾಗಲೇ ಎಂ ಓ .1 ಎಂದು ಗುರುತಿಸಲಾಗಿದೆ

2. One light green coloured Top –ಅದನ್ನು ಈಗಾಗಲೇ ಎಂ ಓ. 2 ಎಂದು ಗುರುತಿಸಲಾಗಿದೆ

3. One white and black coloured pant –ಅದನ್ನು ಈಗಾಗಲೇ ಎಂ ಓ.3 ಎಂದು ಗುರುತಿಸಲಾಗಿದೆ

4. One black coloured Veil –ಅದನ್ನು ಈಗಾಗಲೇ ಎಂ ಓ.4 ಎಂದು ಗುರುತಿಸಲಾಗಿದೆ

5. One maroon coloured under wear – ಅದನ್ನು ಈಗಾಗಲೇ ಎಂ ಓ 5 ಎಂದು ಗುರುತಿಸಲಾಗಿದೆ

6. One black coloured Bra – ಅದನ್ನು ಈಗಾಗಲೇ ಎಂ ಓ 6 ಎಂದು ಗುರುತಿಸಲಾಗಿದೆ

7. One Jeans pant – ಅದನ್ನು ಈಗಾಗಲೇ ಎಂ ಓ 9 ಎಂದು ಗುರುತಿಸಲಾಗಿದೆ

8. One black coloured T shirt – ಅದನ್ನು ಈಗಾಗಲೇ ಎಂ ಓ 8 ಎಂದು ಗುರುತಿಸಲಾಗಿದೆ.

9. One blue coloured T shirt – ಅದನ್ನು ಈಗಾಗಲೇ ಎಂ ಓ 7 ಎಂದು ಗುರುತಿಸಲಾಗಿದೆ.

ಸದರಿ ವಸ್ತುಗಳನ್ನು ಸಾಕ್ಷಿಗೆ ವಿಸಿ ಮುಖಾಂತರ ತೋರಿಸಲಾಗಿ ನೋಡಿ ಗುರುತಿಸಿರುತ್ತಾರೆ. ಪರೀಕ್ಷೆಯ ನಂತರ ಎಲ್ಲಾ ವಸ್ತುಗಳನ್ನು ಪ್ಯಾಕ ಮಾಡಿ ನಮ್ಮ ಕಚೇರಿಯ ಸೀಲ ಹಾಕಿ ನಮ್ಮ ಸ್ಯಾಂಪಲ ಸೀಲನ್ನು ಮತ್ತು ವರದಿಯನ್ನು ಕಚೇರಿಯ ಮುಖಾಂತರ ಕಳಿಸಿಕೊಟ್ಟಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಸಿಎಂ ವಕೀಲರಿಂದ</u>**

ಸದರಿ ಆರ್ಟಿಕಲಗಳನ್ನು ಪೋಲಿಸರು 04.03.2022 ರಂದು ನಮ್ಮ ಕಚೇರಿಗೆ ಕಳಿಸಿರುತ್ತಾರೆ. ದಿನಾಂಕ 04.03.2022 ರಂದು ನಮ್ಮ ಕಚೇರಿಯಲ್ಲಿ ಸದರಿ 9 ಆರ್ಟಿಕಲಗಳನ್ನು ತಂದು ಕೊಟ್ಟಿದ್ದಾರೆ ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರಿಗೆ ಸಹಾಯವಾಗುವಂತೆ ಮತ್ತು ಕೇಸಿಗೆ ಅನುಕೂಲವಾಗುವಂತೆ ನಾನು ಸುಳ್ಳು ರಿಪೋರ್ಟ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಂದೆ ಯಾವುದೇ ಆರ್ಟಿಕಲಗಳು ಬಂದಿಲ್ಲ ಮತ್ತು ನಾನು ಅದನ್ನು ಪರೀಕ್ಷಿಸಿಲ್ಲ ಎಂದರೆ ಸರಿಯಲ್ಲ. ನಾನು ಕೇಸಿಗೆ ಅನುಕೂಲವಾಗುವ ರೀತಿಯಲ್ಲಿ ರಿಪೋರ್ಟನ್ನು ತಯಾರಿಸಿ ಕಳಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

ಸಾಕ್ಷಿಗೆ ಈ ಸಾಕ್ಷಿ ವಿಚಾರಣೆ ಪ್ರತಿಯನ್ನು ಪ್ರಿಂಟ ಮಾಡಿ ಪೀಠಾಸೀನಾಧಿಕಾರಿಯ ಸಹಿ ಮಾಡಿದ ನಂತರ ಸ್ಕ್ಯಾನ ಮಾಡಿ ಮೇಲ ಮೂಲಕ ಕಳಿಸಲಾಗಿದ್ದು ಅದನ್ನು ಡೌನಲೋಡ ಮಾಡಿ ಸಹಿ ಮಾಡಿದ ನಂತರ ಪುನಃ ನ್ಯಾಯಾಲಯದ ಮೇಲ್ ಐಡಿಗೆ ಮೇಲ್ ಮುಖಾಂತರ ಕಳಿಸುವಂತೆ ಸೂಚಿಸಲಾಗಿದ್ದು ಸಹಿ ಮಾಡಿ ಬಂದ ಪ್ರತಿಯನ್ನು ಪ್ರಿಂಟ ಮಾಡಿ ಕಡತದಲ್ಲಿ ಇಡಲಾಗಿದೆ. ಸದರಿ ಪ್ರಿಂಟ ತೆಗೆದು ಸಹಿ ಮಾಡಿದ ಅಸಲು ಪ್ರತಿಯನ್ನು ಪೋಸ್ಟ ಮುಖಾಂತರ ಕಳುಹಿಸುವಂತೆ ಸೂಚಿಸಲಾಗಿದೆ.

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಹೇಳಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿದೆ.)

ಓ ಹೇ ಕೇ ಸರಿ ಇದೆ.

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಧಾರವಾಡ.